# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 88 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಲಬುರ್ಗಿ ವಿಭಾಗದಲ್ಲಿ ಬರುವ ಕೈಗಾರಿಕೆ ವಸಹಾತುಗಳ ಸಂಖ್ಯೆ ಎಷ್ಟು: ಖಾಲಿ ಇರುವ ನಿವೇಶನ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | • ಕಲಬುರ್ಗಿ ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಒಟ್ಟು 34 ಕೈಗಾರಿಕಾ ವಸಾಹತುಗಳು ಇರುತ್ತವೆ.<br>• ಸದರಿ ಕೈಗಾರಿಕಾ ವಸಾಹತುಗಳಲ್ಲಿ ಒಟ್ಟು 786 ನಿವೇಶನಗಳು ಖಾಲಿ ಇದ್ದು, ಜಿಲ್ಲಾವಾರು ವಿವರ ಈ ಕೆಳಗಿನಂತಿರುತ್ತದೆ. |

| ಕ್ರ. ಸಂ. | ಜಿಲ್ಲೆ | ಕೈಗಾರಿಕಾ ವಸಾಹತು | ಖಾಲಿ ಇರುವ ನಿವೇಶನ |
|---|---|---|---|
| 1 | ಕಲಬುರಗಿ | ಎಂ.ಎಸ್.ಕೆಮಿಲ್ ರಸ್ತೆ | 0 |
| 2 | | ಕಪನೂರು 1ನೇ ಹಂತ | 0 |
| 3 | | ಕಪನೂರು 2ನೇ ಹಂತ | 0 |
| 4 | | ಆಳಂದ | 0 |
| 5 | | ಚಿತ್ತಾಪುರ | 0 |
| 6 | | ಚಿಂಚೋಳಿ | 3 |
| 7 | | ಶಹಬಾದ 1ನೇ ಹಂತ | 1 |
| 8 | | ಶಹಬಾದ 2ನೇ ಹಂತ | 0 |
| 9 | | ಜೇವರ್ಗಿ | 0 |
| 10 | | ಸೇಡಂ | 0 |
| 11 | ಯಾದಗಿರಿ | ಶಹಾಪುರ | 0 |
| 12 | | ಶೋರಾಪುರ(ಸುರಪುರ) | 0 |
| 13 | ಬೀದರ್ | ಗಾಂಧಿಗಂಜ್ ಬೀದರ್ | 0 |
| 14 | | ನವಬಾದ್ ಬೀದರ್ | 0 |
| 15 | | ಕೋಲ್ಹಾರ್-ಬೀದರ್ | 0 |
| 16 | | ಹುಮ್ನಾಬಾದ್ 1ನೇ ಹಂತ | 0 |
| 17 | | ಹುಮ್ನಾಬಾದ್ 2ನೇ ಹಂತ | 0 |
| 18 | | ಭಾಲ್ಕಿ | 0 |
| 19 | | ಠಾಣಕುಸನೂರು | 0 |
| 20 | | ಬಸವಕಲ್ಯಾಣ | 0 |
| 21 | ಬಳ್ಳಾರಿ | ಬಳ್ಳಾರಿ | 1 |
| 22 | | ಮುಂಡರಗಿ | 0 |
| 23 | | ಸಿರಗುಪ್ಪ | 0 |
| 24 | | ಸಂಡೂರು | 62 |
| 25 | | ಹರಗಿಣದೋಣಿ | 404 |
| 26 | ವಿಜಯನಗರ | ಹೊಸಪೇಟೆ | 0 |
| 27 | | ಹೂವಿನಹಡಗಲಿ | 0 |
| 28 | ಕೊಪ್ಪಳ | ಗಂಗಾವತಿ | 0 |
| 29 | | ಕೊಪ್ಪಳಬಸಾಪುರ | 315 |
| 30 | ರಾಯಚೂರು | ರಾಯಚೂರು | 0 |
| 31 | | ಯರಮರಸ್ | 0 |
| 32 | | ಲಿಂಗಸುಗೂರು | 0 |
| 33 | | ಸಿಂಧನೂರು | 0 |
| 33 | | ಸಿಂಧನೂರು | 0 |
| 34 | | **ಒಟ್ಟು** | **786** |

<table>
<tr>
<td>ಆ)</td>
<td>ಬೀದರ ಜಿಲ್ಲೆಯಲ್ಲಿ ಹೊಸ ಕೈಗಾರಿಕೆ ನಿವೇಶನ ಪ್ರಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು;</td>
<td>ಬೀದರ್ ಜಿಲ್ಲೆಯಲ್ಲಿ ಹೊಸ ಕೈಗಾರಿಕಾ ವಸಾಹತು ಪ್ರಾರಂಭ ಮಾಡುವ ಪ್ರಸ್ತಾವನೆ ಇರುವುದಿಲ್ಲ.</td>
</tr>
<tr>
<td>ಇ)</td>
<td>2023-24ನೇ ಸಾಲಿನಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿವೆ? (ವಿವರ ನೀಡುವುದು)</td>
<td>2023-24ನೇ ಸಾಲಿನ ಆಯವ್ಯಯ ಘೋಷಣೆ ಪ್ರಕಾರ ಸರ್ಕಾರದ ಆದೇಶ ಸಂಖ್ಯೆ: ಸಿಐ 142 ಸಿಎಸ್ ಸಿ 2023, ದಿ:03.10.2023 ರನ್ವಯ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಹೊಸ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ವಿವರಗಳು ಈ ಕೆಳಗಿನಂತಿರುತ್ತವೆ:
<table>
<tr><th>ಕ್ರ ಸಂ</th><th>ಕೈಗಾರಿಕಾ ವಸಾಹತುವಿನ ಹೆಸರು</th><th>ಜಮೀನಿನ ವಿಸ್ತೀರ್ಣ ಎಕರೆಗಳಲ್ಲಿ</th><th>ಷರಾ</th></tr>
<tr><td>1</td><td>ಕೋಡ್ಕಣಿ - ಸಿರಸಿ-ಸಿದ್ದಾಪುರ,<br>ಉತ್ತರ ಕನ್ನಡ ಜಿಲ್ಲೆ</td><td>47.06</td><td rowspan="5">ಹೊಸ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಲು ದಿನಾಂಕ: 16.01.2024 ರಂದು ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ.</td></tr>
<tr><td>2</td><td>ಕಲ್ಲಂಬಳ್ಳಿ ಗ್ರಾಮ,<br>ಬದನಗುಪ್ಪೆ,<br>ಚಾಮರಾಜನಗರ ಜಿಲ್ಲೆ</td><td>25.00</td></tr>
<tr><td>3</td><td>ಕಣಗಲಾ,<br>ಬೆಳಗಾವಿ ಜಿಲ್ಲೆ</td><td>25.00</td></tr>
<tr><td>4</td><td>ಇಂಡಿ,<br>ವಿಜಯಪುರ ಜಿಲ್ಲೆ</td><td>19.38</td></tr>
<tr><td>5</td><td>ಚಿತ್ತಾಪುರ 2ನೇ ಹಂತ,<br>ಕಲಬುರಗಿ ಜಿಲ್ಲೆ</td><td>31.03</td></tr>
<tr><td>6</td><td>ಹುಬ್ಬಳ್ಳಿ</td><td colspan="2" rowspan="3">ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಲ್ಲಿ ಜಮೀನು ಲಭ್ಯವಿಲ್ಲದ ಕಾರಣ, ಸೂಕ್ತ ಜಮೀನು ಪಡೆಯಲು ಕ್ರಮವಹಿಸಲಾಗುತ್ತಿದೆ.</td></tr>
<tr><td>7</td><td>ಯಾದಗಿರಿ</td></tr>
<tr><td>8</td><td>ಗದಗ</td></tr>
</table>
2023-24ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರದಿಂದ ದೊರೆಯುವ ಸಾಲ, ಸಹಾಯಧನ ಮತ್ತು ಇತರೆ ಸೌಲಭ್ಯಗಳು ಈ ಕೆಳಕೆಳಕಂಡಂತಿವೆ:<br>
1. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ಪಾದನಾ ಘಟಕಗಳಿಗೆ ಗರಿಷ್ಠ ಸಾಲ ರೂ.50 ಲಕ್ಷಗಳವರೆಗೆ ಸೇವಾಘಟಕಗಳಿಗೆ ರೂ.20 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಠ ರೂ.7.50 ಲಕ್ಷದಿಂದ ರೂ.17.50 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ.<br>
2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ, ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರು ಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇಕಡ 6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು.<br>
3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ವಿಶೇಷ ಘಟಕ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ. ನಿವೇಶನದ ಗರಿಷ್ಠ ವಿಸ್ತೀರ್ಣ 2 ಎಕರೆಗಳು.</td>
</tr>
</table>

| | | |
|---|---|---|
| | | 4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ 60 ರಷ್ಟು ಗರಿಷ್ಟ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.<br><br>5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಘಟಕಗಳಿಗೆ ಗರಿಷ್ಟ ರೂ.10.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50ರಷ್ಟು ಬಡ್ಡಿ ರಹಿತ ಗರಿಷ್ಟ ರೂ.75 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ.<br><br>6. ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2020-25 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ.<br><br>1. ಮುದ್ರಾಂಕ ಶುಲ್ಕ ವಿನಾಯಿತಿ<br>2. ನೋಂದಣಿ ಶುಲ್ಕ ರಿಯಾಯಿತಿ.<br>3. ಬಂಡವಾಳ ಹೂಡಿಕೆ ಸಹಾಯಧನ<br>4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>5. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>6. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.<br>7. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.<br>8. ವಿದ್ಯುತ್ ತೆರಿಗೆ ವಿನಾಯಿತಿ<br>9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ<br>10. ಮಳೆನೀರು ಕೊಯ್ಲು / ಸಂರಕ್ಷಣೆ ಸಹಾಯಧನ<br>11. ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ |

ಸಿಐ 46 ಸಿಎಸ್‌ಸಿ 2024

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು